ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಮುಖ್ಯ ಇಂಜಿನಿಯರ್(ವಿ) ರವರ ಕಛೇರಿ
ಕಾ ಮತ್ತು ಪಾ ವಲಯ, ಚಾ.ವಿ.ಸ.ನಿ.ನಿ.
ಮೈಸೂರು-570033,
Telephone No : 0821-2344093
0821-2342164

CHAMUNDESHWARI ELECTRICITY
SUPPLY CORPORATION LIMITED
(A Government of Karnataka Undertaking)
Office of the Chief Engineer(Ele),
O & M Zone , CESC,
Mysuru-570033,
Web site: www.cescmysore.org
E-mail ID : ceez@cescmysore.org.
caz@cescmysore.org

Company Identity Number :- (CIN): U40109KA2004SGC035177

ಕ್ರಮಾಂಕ: ಮು.ಇಂ(ವಿ)/ನಿಅ/ಲೇಅ/ಹಿಸ(ಕಂ)/2023-24/CYS-136 ದಿನಾಂಕ: 03 OCT 2023

ಗೆ,
ಅಧೀಕ್ಷಕ ಇಂಜನಿಯರ್ (ವಿ),
ಕಾ ಮತ್ತು ಪಾ ವೃತ್ತ, ಚಾವಿಸನಿನಿ,
ಮೈಸೂರು/ಚಾ.ನಗರ-ಕೊಡಗು/ಮಂಡ್ಯ.
ಮತ್ತು
ಎಲ್ಲಾ ಕಾರ್ಯನಿರ್ವಾಹಕ ಇಂಜನಿಯರ್(ವಿ)
ಕಾ ಮತ್ತು ಪಾ ವಿಭಾಗ, ಚಾವಿಸನಿನಿ,
ಮೈಸೂರು ವಲಯ ವ್ಯಾಪ್ತಿ.

ಮಾನ್ಯರೆ,

ವಿಷಯ: ಗೃಹಜ್ಯೋತಿ ಯೋಜನೆಯಡಿ ನೋಂದಣಿಯಾಗಿರುವ ಗ್ರಾಹಕರ ಹಾಗೂ ಇತರೆ ಜಕಾತಿಗಳಲ್ಲಿ ಬಾಕಿ ಉಳಿದುಕೊಂಡಿರುವ ವಿದ್ಯುತ್ ಕಂದಾಯ ಬಾಕಿ ವಸೂಲಾತಿ ಮಾಡುವ ಬಗ್ಗೆ.

ಉಲ್ಲೇಖ:1. ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ ರವರ ಆದೇಶ ಸಂಖ್ಯೆ: ಎನರ್ಜಿ/154/ಪಿಎಸ್ಆರ್/2023, ದಿನಾಂಕ 20.05.2023.
2. ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ ರವರ ಆದೇಶ ಸಂಖ್ಯೆ: ಎನರ್ಜಿ/164/ಪಿಎಸ್ಆರ್/2023, ದಿನಾಂಕ 15.06.2023.
3. ಈ ಕಛೇರಿ ಪತ್ರ ಸಂಖ್ಯೆ ಮು.ಇಂ(ವಿ)/ನಿಅ/ಲೇಅ/ಹಿಸ(ಕಂ)/2023-24/4108-4111 ದಿನಾಂಕ 14.09.2023
4. ಈ ಕಛೇರಿ ಪತ್ರ ಸಂಖ್ಯೆ ಮು.ಇಂ(ವಿ)/ನಿಅ/ಲೇಅ/ಹಿಸ(ಕಂ)/2023-24/CYS-131 ದಿನಾಂಕ 21.09.2023.

*\~*\~*\~*\~*

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (2) ರ ಸರ್ಕಾರದ ಆದೇಶದ ಕಂಡಿಕೆ (8) ರಲ್ಲಿ ದಿನಾಂಕ 30.06.2023 ರ ಅಂತ್ಯಕ್ಕೆ (ಜೂನ್ 2023ರ ಮಾಹೆಯಲ್ಲಿ ಬಳಸಿದ ವಿದ್ಯುತ್ ಪ್ರಮಾಣಕ್ಕೆ ಜುಲೈ 2023 ರಲ್ಲಿ ವಿತರಿಸಿದ ಬಿಲ್ಲಿನ ಮೊತ್ತ ಒಳಗೊಂಡಂತೆ) ಬಾಕಿ ಇರುವ ವಿದ್ಯುತ್ ಶುಲ್ಕದ ಬಾಕಿ ಮೊತ್ತವನ್ನು 3 ತಿಂಗಳೊಳಗೆ ಪಾವತಿಸತಕ್ಕದ್ದು. ಬಾಕಿ ಮೊತ್ತವನ್ನು ನಿಗಧಿತ ಅವಧಿಯೊಳಗೆ ಪಾವತಿಸದಿದ್ದಲ್ಲಿ ಅಂತಹ ಗ್ರಾಹಕರ ವಿದ್ಯುತ್ ಸ್ಥಾವರಗಳ ಸಂಪರ್ಕವನ್ನು ಕಡಿತಗೊಳಿಸಲಾಗುವುದು ಎಂದು ಉಲ್ಲೇಖಿಸಲಾಗಿದೆ. ಗೃಹ ಜ್ಯೋತಿ ಯೋಜನೆಯಡಿ ನೋಂದಣಿಯಾಗಿರುವ ಗ್ರಾಹಕರ ವಿದ್ಯುತ್ ಕಂದಾಯ ಬಾಕಿ ವಸೂಲಾತಿ ಮಾಡುವ ಬಗ್ಗೆ ಉಲ್ಲೇಖಿತ ಪತ್ರ (4) ರಲ್ಲಿ ಈ ಕಛೇರಿಯಿಂದ ನಿರ್ದೇಶನವನ್ನು ನೀಡಲಾಗಿತ್ತು. ಅದರಂತೆ ಈ ಕೆಳಕಂಡ ಮಾರ್ಗಸೂಚಿಯನ್ನು ಅನುಸರಿಸಿ ಬಾಕಿ ಇರುವ ಕಂದಾಯ ಮೊತ್ತವನ್ನು ವಸೂಲಾತಿ ಮಾಡಲು ಕ್ರಮ ವಹಿಸುವುದು.

1. ದಿನಾಂಕ 03.10.2023 ರಿಂದ 13.10.2023 ರವರೆಗೆ ವಿದ್ಯುತ್ ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ ಮುಕ್ತಾಯವಾಗಿರುವ ಎಲ್ಲಾ ಜಕಾತಿಯ ಸ್ಥಾವರಗಳನ್ನು (ಕುಡಿಯುವ ನೀರು, ನ್ಯಾಯಾಲಯ, ಆಸ್ಪತ್ರೆ ಮತ್ತು ಪೊಲೀಸ್ ಸ್ಟೇಷನ್‌ಗಳನ್ನು ಹೊರತುಪಡಿಸಿ) ವಿದ್ಯುತ್ ನಿಲುಗಡೆಗೊಳಿಸಲು ಕಡ್ಡಾಯವಾಗಿ ಕ್ರಮವಹಿಸುವುದು.
2. ಕಂದಾಯ ವಸೂಲಾತಿಗೆ ಸಂಬಂಧಿಸಿದಂತೆ ತಂಡವನ್ನು ರಚಿಸಲು ದಿನಾಂಕ: 03.10.2023 ರಿಂದಲೇ ಅನ್ವಯವಾಗುವಂತೆ ಪವರ್‌ಮ್ಯಾನ್‌ವಾರು ಗುರಿ ನಿಗದಿಪಡಿಸಿ, ಪ್ರತಿದಿನ ಕಂದಾಯ ಬಾಕಿ ಇರುವ 50 ಸ್ಥಾವರಗಳನ್ನು ಕಡ್ಡಾಯವಾಗಿ ವಿದ್ಯುತ್ ನಿಲುಗಡೆಗೊಳಿಸಲು ಅಧಿಕೃತ ಜ್ಞಾಪನ ಪತ್ರವನ್ನು ಹೊರಡಿಸುವುದು.

ಪು.ತಿ.ನೋ

3. ಕಂದಾಯ ಶಾಖೆಯಿಂದ ಪ್ರತಿದಿನ ವಿದ್ಯುತ್ ನಿಲುಗಡೆಗೊಳಿಸಬೇಕಾದ ಸ್ಥಾವರಗಳ ವಿವರಗಳನ್ನು ಉಪವಿಭಾಗದ ಸಹಾಯಕ ಲೆಕ್ಕಾಧಿಕಾರಿ/ಹಿರಿಯ ಸಹಾಯಕರು ರವರು ಪರಿಶೀಲಿಸಿ, ಸಹಿ ಮಾಡಿ ಸಿದ್ಧಪಡಿಸಿದ ವಿದ್ಯುತ್ ನಿಲುಗಡೆ ಪಟ್ಟಿಯನ್ನು ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ನೀಡಿ ಸಹಿಯನ್ನು ಪಡೆದುಕೊಳ್ಳುವುದು.
4. ಪ್ರತಿದಿನ ವಿದ್ಯುತ್ ನಿಲುಗಡೆಗೊಂಡ ಸ್ಥಾವರಗಳ ವಿವರ ಹಾಗೂ ಕಂದಾಯ ವಸೂಲಾತಿ ವಿವರಗಳನ್ನು ಸದರಿ ದಿನದಂದೇ ಶಾಖಾಧಿಕಾರಿ ರವರು ಕಂದಾಯ ಶಾಖೆಗೆ ಸಹಿ ಮಾಡಿದ ವಿವರಗಳನ್ನು ನೀಡುವುದು. ಹೀಗೆ ಪಡೆದುಕೊಳ್ಳಲಾದ ಪ್ರತಿದಿನದ ವಿದ್ಯುತ್ ನಿಲುಗಡೆಗೊಂಡ ವಿವರಗಳನ್ನು ಕಂದಾಯ ಶಾಖೆಯವರು ತಂತ್ರಾಂಶದಲ್ಲಿ ನಮೂದಿಸುವ್ಯದು.
5. ಮಹಜರ್ ಡಿಸ್‌ಕನೆಕ್ಷನ್ ಮಾಡಲು ಕಂದಾಯ ಶಾಖೆಯಿಂದ ರೂ.5000/- ಕ್ಕೂ ಮೇಲ್ಪಟ್ಟ ಕಂದಾಯ ಬಾಕಿಯಿರುವ ಸ್ಥಾವರವಾರು ವಿವರವನ್ನು ಶಾಖಾಧಿಕಾರಿಗಳಿಗೆ ನೀಡಿ ಸಹಿಯನ್ನು ಪಡೆದು, ಸ್ಥಾವರವಾರು ವಿವರದ ಮಾಹಿತಿಯನ್ನು ಪ್ರತ್ಯೇಕವಾಗಿ ಶಾಖಾವಾರು ಕಡತವನ್ನು ನಿರ್ವಹಿಸುವುದು.
6. ರೂ. 5000/-ಕ್ಕೂ ಮೇಲ್ಪಟ್ಟ ಕಂದಾಯ ಬಾಕಿ ಇರುವ ಸ್ಥಾವರಗಳ ಸರ್ವಿಸ್ ಮೈನ್ ಕಳಚಿ ಅಂತಿಮ ರೀಡಿಂಗ್ ದಾಖಲಿಸುವುದು.
7. ಶಾಖಾಧಿಕಾರಿರವರು ಪ್ರತಿದಿನ ರೂ. 5000/-ಕ್ಕೂ ಮೇಲ್ಪಟ್ಟ ಕಂದಾಯ ಬಾಕಿ ಇರುವ 25 ಸ್ಥಾವರಗಳ ಮಹಜರ್ ಡಿಸ್‌ಕನೆಕ್ಷನ್ ಮಾಡತಕ್ಕದ್ದು ಹಾಗೂ ಸದರಿ ಕಾರ್ಯವನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ರವರು ಮೇಲುಸ್ತುವಾರಿ ಮಾಡುವುದು.
8. ಶಾಖಾಧಿಕಾರಿಯವರಿಂದ ಮಹಜರ್ ಡಿಸ್‌ಕನೆಕ್ಷನ್ ಮಾಡಿರುವ ವಿವರವನ್ನು ಕಂದಾಯ ಶಾಖೆಯವರು, ಪಡೆದು ಪರಿಶೀಲಿಸಿಕೊಂಡು, ಟಿ.ಆರ್.ಎಂ. ತಂತ್ರಾಂಶದಲ್ಲಿ ನಮೂದಿಸುವುದು.
9. ಕಂದಾಯ ಶಾಖೆಯಲ್ಲಿ ಶಾಖಾಧಿಕಾರಿಯವರು ನೀಡಿರುವ ಮಹಜರ್ ಡಿಸ್‌ಕನೆಕ್ಷನ್ ಪ್ರತಿಯಲ್ಲಿ ಸಂಬಂಧಪಟ್ಟ ಗ್ರಾಹಕರ ಸಹಿ, ಶಾಖಾಧಿಕಾರಿಯವರ ಸಹಿ ಹಾಗೂ ಸ್ಥಾವರವನ್ನು ವಿದ್ಯುತ್ ನಿಲುಗಡೆಗೊಳಿಸಿರುವ ನಿರ್ವಹಣಾ ಸಿಬ್ಬಂದಿಯ ಸಹಿ ಇರುವ ಬಗ್ಗೆ ಖಾತರಿಪಡಿಸಿಕೊಂಡು ಅಗತ್ಯ ಕ್ರಮವಹಿಸುವುದು.
10. ಈ ಹಿಂದೆ ಮಹಜರ್ ಡಿಸ್‌ಕನೆಕ್ಷನ್ ಮಾಡಿದ್ದೂ ಸಹ ಬಾಕಿ ಪಾವತಿಸದೇ ಅನಧಿಕೃತವಾಗಿ ವಿದ್ಯುತ್ ಸಂಪರ್ಕವನ್ನು ಮಾಡಿಕೊಂಡಿದ್ದರೇ ಅಂತಹ ಸ್ಥಾವರಗಳಿಗೆ ಕಲಂ 135 ವಿದ್ಯುತ್ ಕಾಯ್ದೆ ಅನುಸಾರ ಕ್ರಮವಹಿಸುವುದು.
11. ವಿದ್ಯುತ್ ನಿಲುಗಡೆಗೊಂಡ ಎಲ್ಲಾ ಸ್ಥಾವರಗಳಿಗೆ ಡಿ & ಆರ್ ಶುಲ್ಕವನ್ನು ಕಡ್ಡಾಯವಾಗಿ ವಿಧಿಸಿ ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಯಾದ 61.9027 ಗೆ ಸರಿಯಾಗಿ ನಮೂದಿಸುವುದು. ಇಲ್ಲವಾದಲ್ಲಿ ಡಿ & ಆರ್ ಶುಲ್ಕಗಳಿಗೆ ಅನ್ವಯಿಸುವ ಜಿ.ಎಸ್.ಟಿ ಅನ್ನು ಪಾವತಿಸಲು ನಿಗಮದ ವತಿಯಿಂದ ಮುಂದಿನ ದಿನಗಳಲ್ಲಿ ಆಕ್ಷೇಪಣೆ ಬಂದಲ್ಲಿ ಸಂಬಂಧಪಟ್ಟ ಕಂದಾಯ ಶಾಖೆಯವರನ್ನೇ ಜವಾಬ್ದಾರರನ್ನಾಗಿ ಮಾಡುವುದು.
12. ಉಲ್ಲೇಖ ಪತ್ರ (4) ರನ್ವಯ ಕಂದಾಯ ಬಾಕಿ ಇರುವ ಸ್ಥಾವರಗಳಿಗೆ ಈಗಾಗಲೇ ನೋಟೀಸನ್ನು ಜಾರಿ ಮಾಡಿರುವ ಎಲ್ಲಾ ಸ್ಥಾವರಗಳಿಂದ ಕಂದಾಯ ವಸೂಲಾತಿ ಮಾಡುವುದು. ಇಲ್ಲವಾದಲ್ಲಿ ವಿದ್ಯುತ್ ನಿಲುಗಡೆಗೊಳಿಸುವುದು.
13. ಉಪವಿಭಾಗಗಳಿಂದ ನೀಡುವ ನಿರ್ದೇಶನವನ್ನು ಪಾಲಿಸದ ನಿರ್ವಹಣಾ ಸಿಬ್ಬಂದಿಗಳು, ಎಂ.ಎಫ್.ಎಫ್ ಹಾಗೂ ಎಂ.ಆರ್ ಗಳ ಮೇಲೆ ಶಿಸ್ತುಕ್ರಮ ವಹಿಸುವುದು.
14. ವಿಭಾಗ ಮಟ್ಟದಲ್ಲಿ ಪ್ರತಿದಿನ ಕಂದಾಯ ವಸೂಲಾತಿಯನ್ನು ಮೇಲ್ವಿಚಾರಣೆ ಮಾಡಲು ಒಬ್ಬ ನೋಡಲ್ ಅಧಿಕಾರಿಯನ್ನು ನೇಮಿಸಿ ಪ್ರತಿದಿನ ವಿಭಾಗ ಕಛೇರಿಯಿಂದ ಉಪವಿಭಾಗವಾರು ಹಾಗೂ ಶಾಖಾವಾರು ಕಂದಾಯ ವಸೂಲಾತಿಯ ಪ್ರಗತಿಯನ್ನು ಪರಿಶೀಲಿಸಿ ಈ ಕಛೇರಿಯಿಂದ ನೀಡಿರುವ ನಿರ್ದೇಶನವನ್ನು ಪಾಲಿಸದೇ ಇರುವ ಶಾಖಾಧಿಕಾರಿಗಳ ವಿವರವನ್ನು ವಿಭಾಗಾಧಿಕಾರಿಗಳಿಗೆ ನೀಡುವಂತೆ ಸೂಚಿಸುವುದು.
15. ಪರಿಶೀಲನಾ ಅಧಿಕಾರಿ/ಸಿಬ್ಬಂದಿರವರು ಸ್ಥಾವರಗಳಲ್ಲಿ ವಿದ್ಯುತ್ ಬಾಕಿಯು ವಸೂಲಾತಿ ಆಗದಿದ್ದರೂ ಸದರಿ ಸ್ಥಾವರಗಳಿಗೆ ವಿದ್ಯುತ್ ಸಂಪರ್ಕವಿರುವುದು ಕಂಡುಬಂದಲ್ಲಿ ಸಂಬಂಧಿಸಿದ ಪವರ್ ಮ್ಯಾನ್/ ಎಂ.ಎಫ್.ಎಫ್/ಎಂ.ಆರ್. ವಿರುದ್ಧ ಶಿಸ್ತು ಕ್ರಮ ಜರುಗಿಸಲು ವರದಿಗಳನ್ನು ನೋಡಲ್ ಅಧಿಕಾರಿರವರಿಗೆ ಸಲ್ಲಿಸುವುದು.
16. ಉಪವಿಭಾಗಗಳ ಕಾರ್ಯಕ್ಷಮತೆಯನ್ನು ಪರಿಶೀಲಿಸಲು ವಿಭಾಗದ ವತಿಯಿಂದ 02 ದಿನಗಳಿಗೊಮ್ಮೆ ಯಾವುದಾದರೂ ಶಾಖೆಗಳಿಗೆ ಭೇಟಿ ನೀಡಿ ವಿದ್ಯುತ್ ಕಂದಾಯ ಬಾಕಿ ಇರುವ ಸ್ಥಾವರಗಳಿಗೆ ವಿದ್ಯುತ್ ನಿಲುಗಡೆಗೊಳಿಸಲಾಗುತ್ತಿದೆಯೇ ಎಂಬುದರ ಬಗ್ಗೆ ಪರಿಶೀಲಿಸುವುದು.

ಮುಂದುವರೆದಿದೆ.

17. ಅಕ್ಟೋಬರ್-2023 ಮಾಹೆಯ ಮೊದಲನೇ ವಾರದಲ್ಲಿ ವೃತ್ತವಾರು ಕಂದಾಯ ವಸೂಲಾತಿಯ ಪ್ರಗತಿಯನ್ನು ಪರಿಶೀಲಿಸಲು ಸಭೆಯನ್ನು ಕರೆಯಲಾಗುತ್ತಿದ್ದು, ಸದರಿ ಸಭೆಯಲ್ಲಿ ದಿನಾಂಕ: 03.10.2023 ರಿಂದ ಸಭೆಯ ಹಿಂದಿನ ದಿನಾಂಕದವರೆಗೆ ಕಂದಾಯ ವಸೂಲಾತಿಯ ಪ್ರಗತಿಯನ್ನು ಹಾಗೂ ವಿಭಾಗ ಮತ್ತು ಉಪವಿಭಾಗಗಳಿಂದ ಅಧಿಕಾರಿ ನೌಕರರವಾರು ನಿಗದಿಪಡಿಸಿರುವ ಜವಾಬ್ದಾರಿಯನ್ನು ಪರಿಶೀಲಿಸಲಾಗುವುದು. ಒಂದು ವೇಳೆ ಮೇಲ್ವಿಚಾರಣಾಧಿಕಾರಿಗಳ ಹಂತದಲ್ಲಿಯೇ ಜವಾಬ್ದಾರಿಯನ್ನು ನಿಗದಿಪಡಿಸುವಲ್ಲಿ ವಿಫಲರಾದ ಪಕ್ಷದಲ್ಲಿ ಮೇಲ್ವಿಚಾರಣಾಧಿಕಾರಿಗಳಾದ ವಿಭಾಗಾಧಿಕಾರಿ/ಉಪವಿಭಾಗಾಧಿಕಾರಿ ರವರುಗಳನ್ನೇ ನೇರ ಜವಾಬ್ದಾರರನ್ನಾಗಿ ಮಾಡಿ ಶಿಸ್ತು ಕ್ರಮವಹಿಸಲಾಗುವುದು ಎಂದು ಸೂಚಿಸಿದೆ.

ತಮ್ಮ ವಿಶ್ವಾಸಿ,

ಮುಖ್ಯ ಇಂಜನಿಯರ್ (ವಿ),
ಕಾ ಮತ್ತು ಪಾ ವಲಯ, ಚಾವಿಸನಿನಿ,
ಮೈಸೂರು.